**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

| | |
|---|---|
| ಕ್ರಿ ಮಿ ನಂ | 429/2023 |
| ಅರ್ಜಿದಾರ ಪರ | ಪಿ.ಡಬ್ಲ್ಯೂ-2 |
| ದಿನಾಂಕ | 07-02-2026 |

| | |
|---|---|
| ಸಾಕ್ಷಿದಾರನ ಹೆಸರು | ಮೋಹನ ಶಿಂದೆ |
| ತಂದೆಯ ಹೆಸರು | ಚಿದಾನಂದ |
| ವಯಸ್ಸು | 37 ವರ್ಷ |
| ಕೆಲಸ | ಖಾಸಗಿ ನೌಕರ |
| ವಾಸ | ಚಿಕ್ಕೋಡಿ |

ಸಾಕ್ಷಿಗೆ ಈ ದಿನ ದಿಃ 07-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ

1) ನಾನು ಅರ್ಜಿದಾರರ ಚಿಕ್ಕಪ್ಪನ ಮಗ ಆಗಿರುತ್ತೇನೆ. ಅರ್ಜಿದಾರರ ಮದುವೆ ನಮ್ಮ ಕುಟುಂಬದವರು ಸೇರಿ ಎದುರುದಾರರ ಜೊತೆ ಮಾಡಿಕೊಟ್ಟಿರುತ್ತೇವೆ. ಈ ಮೊದಲು ಎದುರುದಾರರ ಮನೆಯಲ್ಲಿ ಅವರ ಅತ್ತಿಗೆ ಆತ್ಮ ಹತ್ಯೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ಅವರ ಮನೆಗೆ ಯಾರು ಹೆಣ್ಣು ಕೊಡಲು ತಯಾರು ಇರಲಿಲ್ಲ. ಅರ್ಜಿದಾರರ ತಾಯಿ ಎದುರುದಾರರ ಸಂಬಂಧಿಕರಾಗಿದ್ದರಿಂದ ಈ ಮದುವೆ ಮಾಡಲು ಒಪ್ಪಿ ಕೊಂಡರು. ಅರ್ಜಿದಾರರು ಮದುವೆಯಾದ ನಂತರ ಎದುರುದಾರರು ಕೆಲವೊಂದು ದಿನ ಸರಿಯಾಗಿ ನೋಡಿಕೊಂಡಿರುತ್ತಾರೆ. ಅವರ ಮನೆಯಲ್ಲಿ ಎದುರುದಾರನ ಇಬ್ಬರು ಸಹೋದರಿಯವರು ಸಹ ಇರುತ್ತಿದ್ದರು. ಅದರಲ್ಲಿ ಒಬ್ಬರದ್ದು ಮದುವೆಯಾಗಿರುತ್ತದೆ. ಅರ್ಜಿದಾರರ ನಾದನಿಯವರು ಅದೇ ಮನೆಯಲ್ಲಿ ಇರುವುದರಿಂದ ಅರ್ಜಿದಾರಳಿಗೆ ಕಿರುಕುಳ ನೀಡುತ್ತಾ

ಬಂದಿರುತ್ತಾರೆ. ಎದುರುದಾರರು ಹುಬ್ಬಳಿಯಲ್ಲಿ ಖಾಸಗಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಎದುರುದಾರನು ವಾರಕ್ಕೆ ಒಂದು ಸಲ ಮನೆಗೆ ಬಂದು ಹೋಗುತ್ತಿದ್ದರು. ಅವರು ಮನೆಗೆ ಬಂದಾಗ ಅರ್ಜಿದಾರರ ನಾದನಿಯವರು ಎದುರುದಾರನಿಗೆ ಚಾಡಿ ಹೇಳುತ್ತಿದ್ದರಿಂದ ಎದುರುದಾರನು ಅರ್ಜಿದಾರಳಿಗೆ ಹೊಡಿ ಬಡಿ ಮಾಡುತ್ತಿದ್ದರು. ಈ ವಿಷಯ ಕುರಿತು ನಮ್ಮ ಚಿಕ್ಕಪ್ಪ ಎದುರುದಾರನ ಮನೆಗೆ ಹೋಗಿ ಸಾಕಷ್ಟು ಸಲ ಹೋಗಿ ಬುದ್ದಿ ಮಾತು ಹೇಳಿದರೂ ಎದುರುದಾರನು ಕೇಳಿರುವುದಿಲ್ಲ.

2) 2018 ರಲ್ಲಿ ಅರ್ಜಿದಾರಳಿಗೆ ಸಂಕೇಶ್ವರದ ಸರಕಾರಿ ಆಸ್ಪತ್ರೆಯಲ್ಲಿ 2ನೇ ಮಗು ಜನಿಸಿರುತ್ತದೆ. ಆಗ ಎದುರುದಾರನು ಅರ್ಜಿದಾರಳಿಗೆ ನೋಡಿಕೊಳ್ಳಲು ಆಗುವುದಿಲ್ಲ ಎಂದು ತವರು ಮನೆಗೆ ತಂದು ಬಿಟ್ಟು ಹೋದರು. ನಂತರ 1 ರಿಂದ 3 ಅರ್ಜಿದಾರರಿಗೆ ಎದುರುದಾರನು ತಮ್ಮ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ಹಿರಿಯರು ಸೇರಿ ಪಂಚಕಿ ಮಾಡಿ ಅವರಿಗೆ ಕರೆದುಕೊಂಡು ಹೋಗಲು ಹೇಳಿದರೂ ಸಹ ಎದುರುದಾರನು ಕರೆದುಕೊಂಡು ಹೋಗಿರುವುದಿಲ್ಲ. ನಾನು ಕರೆ ಮಾಡಿ ಎದುರುದಾರರಿಗೆ ಕರೆದಾಗ ಸದರಿಯವರು ಬಂದು ಮಾತನಾಡುವಾಗ ಎಲ್ಲರಿಗೆ ನುಗ್ಗಿಸಿ ನಾನು ಕರೆದುಕೊಂಡು ಹೋಗುವುದಿಲ್ಲ ಏನು ಬೇಕಾದರೆ ಮಾಡಿ ಕೊಳ್ಳಿ ಎಂದು ಹೇಳಿ ಹೋದರು. ಅದೇ ದಿನ ನಾನು ಸಂಕೇಶ್ವರದ ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಪೊಲೀಸರು ಅರ್ಜಿದಾರರು ಮತ್ತು ಎದುರುದಾರರಿಗೆ ಕರೆದಾಗ ಎದುರುದಾರರು 2 ತಿಂಗಳ ಸಮಯವನ್ನು ಕೇಳಿ ಅಲ್ಲಿ ಬರವಣಿಗೆಯಲ್ಲಿ ಹೇಳಿ ಹೋದರು. ಅಂದಿನಿಂದ ಈಗಿನವರಿಗೂ ಎದುರುದಾರರು ಅರ್ಜಿದಾರರಿಗೆ ಕರೆದುಕೊಂಡು ಹೋಗಿರುವುದಿಲ್ಲ. 8 ವರ್ಷಗಳಿಂದ ಅರ್ಜಿದಾರರು ತನ್ನ ಮಕ್ಕಳನ್ನು ನೋಡಿ ಕೊಂಡು ಉಪಜೀವನ ನಡೆಯಿಸುತ್ತಿದ್ದಾರೆ.

ಪಾಟೀ ಸವಾಲುಃ ಎದುರುದಾರ ಪರ ಶ್ರೀ ಎ ಕೆ ಬಿ ವಕೀಲರಿಂದ
ಎದುರುದಾರ ಪರ ವಕೀಲರು ಪಾಟೀ ಸವಾಲು ಕಾಲವಕಾಶ ಕೇಳಿದ್ದು, ಅವರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು ವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಿ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

C/C 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ